ದಿನಾಂಕಃ 20-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರ ಃ ಶ್ರೀ ಎಸ್ ವಿ ಎಮ್ ವಕೀಲರಿಂದಃ**

**3.** ನಮ್ಮ ಊರು ಕುಂದಗೋಳ ತಾಲೂಕಿನ ಯರಗುಪ್ಪಿ ಎಂದರೆ ಸರಿ. ಫ್ರಾಸಾ 2 ಸಹ ಯರಗುಪ್ಪಿ ಗ್ರಾಮದವರು ಎಂದರೆ ಸರಿ. ನಾನು ಹಾಗೂ ಅವರು ಕೂಡಿಯೇ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಫ್ರಾಸಾ 2 ಸಂಬಂಧಿಕರು ಎಂದರೆ ಸರಿ. 2 ನೇ ಪ್ರತಿವಾದಿಯ ಹೆಸರು ಕಿರಣ ಮಹಾಬಳೇಶ್ವರ ಮಾದನೂರ ಎಂದರೆ ಸರಿ. ಮಹಾಬಳೇಶ್ವರ ಮಾದನೂರ ಕಿರಣನ ಜನಕ ತಂದೆ ಎಂದರೆ ಸರಿ. ಕಿರಣ ಮಹಾಬಳೇಶ್ವರ ಮಾದನೂರ ಅವರ ಜೊತೆಗೆ ಇದ್ದಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಹಾಗೂ ಫ್ರಾಸಾ 2 ರ ಜೊತೆ ಕೂಡಿಯೇ ಇರುತ್ತಾನೆ ಎಂದು ನುಡಿಯುತ್ತಾರೆ.

**4.** ದಾವಾ ಆಸ್ತಿಯ ಬಗ್ಗೆ ವ್ಯಾಜ್ಯ ಇರುವ ಬಗ್ಗೆ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖರೀದಿ ಕರಾರು ಪತ್ರ ನೋಂದ ಮಾಡುವ ಸಮಯದಲ್ಲಿ ಉತಾರ ನೋಡಿದ್ದೀರಾ ಎಂದರೆ ನೋಡಿದ್ದೇನೆ. ಖೊಟ್ಟಿ ಕ್ರಯ ಕರಾರು ಮಾಡಿದ ದಿನವೇ ಉತಾರದಲ್ಲಿ ಬೆಳಗಾವಿ ಜಿಲ್ಲಾ ನ್ಯಾಯಾಲಯದಲ್ಲಿ ಆರ್ ಎ ನಂಬರ 26/2008 ರಲ್ಲಿ ತಡಯಾಜ್ಞೆ ನಮೂದು ಇರುವ ಬಗ್ಗೆ ನಿಮಗೆ ಗೊತ್ತಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಸ್ವತಃ ಹೇಳುತ್ತಾರೆ ಅದು ಖೊಟ್ಟಿ ಕ್ರಯದ ಕರಾರು ಪತ್ರವಲ್ಲ. ಬೆಳಗಾವಿ ನ್ಯಾಯಾಲಯದಲ್ಲಿ ಹಾಜರಾಗಿದ್ದೀರಾ ಎಂದರೆ ಇಲ್ಲ. ಬೆಳಗಾವಿ ನ್ಯಾಯಾಲಯದಿಂದ ನೋಟೀಸ ಬಂದಿತ್ತಾ ಎಂದರೆ ಇಲ್ಲ. ಬೆಳಗಾವಿ ನ್ಯಾಯಾಲಯದಿಂದ ನೋಟೀಸ ಬಂದಿದ್ದರು ನೀವು ಹಾಜರಾಗಿಲ್ಲ ಎಂದರೆ ಸರಿಯಲ್ಲ.

**5.** ದಾವಾ ಸ್ವತ್ತು ಕುಂದಗೋಳ ಪೋಲೀಸ್ ಠಾಣಾ ಹಿಂಭಾಗದಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನ ಸುತ್ತಮುತ್ತಲಿನ ಜಮೀನುಗಳು ಎಂದರೆ ಬಿನ್ ಶೇತ್ಕಿ ಜಮೀನುಗಳು ಎಂದರೆ ಸರಿಯಲ್ಲ. ಈಗಲೂ ಶೇತ್ಕಿ ಜಮೀನುಗಳಿವೆಯಾ ಎಂದರೆ ಹೌದು. ಪೋಲೀಸ್ ಠಾಣೆಯಿಂದ 500 ಮೀಟರ ಅಂತರದಲ್ಲಿ ದಾವಾ ಸ್ವತ್ತು ಇದೆ. ದಾವಾ ಸ್ವತ್ತು ನಗರ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನನ್ನ

ವ್ಯವಹಾರ ಜಮೀನುಗಳನ್ನು ಖರೀದಿಸಿ ಬೀನ್ ಶೇತ್ಕಿ ಜಮೀನುಗಳಾಗಿ ಪರಿವರ್ತಿಸಿ ಪ್ಲಾಟ ಮಾಡಿ ಮಾರಾಟ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಬಿನ್ ಶೇತ್ಕಿ ಜಮೀನುಗಳು ಇಲ್ಲ.

**6.** ದಾವಾ ಆಸ್ತಿಯನ್ನು ರೂ. **16** ಲಕ್ಷಕ್ಕೆ ಖರೀದಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಸಂಚಕಾರ ಹಣ ರೂ. **12** ಲಕ್ಷವನ್ನು **1** ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾದನೂರ ಮೂಲಕ **1** ನೇ ಪ್ರತಿವಾದಿಯನ್ನು ನಂಬಿಸಿ, ರೂ. **12** ಲಕ್ಷ ಹಣವನ್ನು ಕೊಟ್ಟು ಖೊಟ್ಟಿ ಖರೀದಿ ಕರಾರು ಪತ್ರದ ಮೇಲೆ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಹಿಡಿಯುವಾಗ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದರೆ **1** ನೇ ಪ್ರತಿವಾದಿ ಹಾಗೂ **2** ನೇ ಪ್ರತಿವಾದಿ ಜನಕ ತಂದೆ ಮಹಾಬಳೇಶ್ವರ ಮಾದನೂರ ಇವರ ಹೆಸರಿನಲ್ಲಿತ್ತು. ಮಾದನೂರ ಅವರನ್ನು ಕೇಳಿಯೇ ನಾನು ವ್ಯವಹಾರಗಳನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಅವರ ಸಂಬಂಧ ಚೆನ್ನಾಗಿದೆ ಎಂದರೆ ಸರಿಯಲ್ಲ. ನೋಂದ ದಿನವೇ ರೂ. **12** ಲಕ್ಷ ಹಣವನ್ನು **1** ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಸಂಚಕಾರ ಪತ್ರ ಆಗುವ ದಿನ **1** ನೇ ಪ್ರತಿವಾದಿಗೆ ನಾನು ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಉಳಿದ ರೂ. **4** ಲಕ್ಷ ಹಣವನ್ನು ಖರೀದಿ ಪತ್ರ ಆಗುವ ದಿನ ಯಾರಿಗೆ ಕೊಡಬೇಕೆಂದು ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ಸುಧಾ ಮೊರಬದ ಅವರಿಗೆ ಕೊಡಬೇಕು ಎಂದು ನುಡಿಯುತ್ತಾರೆ. **2** ನೇ ಪ್ರತಿವಾದಿಗೆ ಕ್ರಯದ ಪ್ರತಿಫಲದ ಹಣ ಕೊಡಬೇಕು ಎಂದು ಮಾತುಕತೆ ಆಗಿತ್ತಾ ಎಂದರೆ ಇಲ್ಲ. ಪ್ರತಿಫಲದ ಹಣ ಇಬ್ಬರೂ ಪಡೆದು ಹಕ್ಕುದಾರರಾ ಎಂದರೆ ಸಾಕ್ಷಿ ಅದು ಅವರಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ಸಂಚಕಾರ ಪತ್ರ ನೋಂದಣಿ ಸಮಯದಲ್ಲಿ **2** ನೇ ಪ್ರತಿವಾದಿ ಅಲ್ಪವಹಿ ಇದ್ದ ಗೈರು ಪಾಯ್ದೆ ಪಡೆದು **1** ನೇ ಪ್ರತಿವಾದಿಯನ್ನು ನಂಬಿಸಿ ಮಾದನೂರ ಹಾಗೂ ನಾನು ಸೇರಿ ಖೊಟ್ಟಿ ಸಂಚಕಾರ ಪತ್ರ ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ **2** ನೇ ಪ್ರತಿವಾದಿ ಅಲ್ಪವಹಿ ಅಲ್ಲ, **18** ವರ್ಷ **4** ತಿಂಗಳು ಆಗಿತ್ತು. ಆ ಸಂಬಂಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಮಾಡುತ್ತೇನೆ ಎಂದು ನುಡಿಯುತ್ತಾರೆ.

**7. 2020** ರಲ್ಲಿ ವಯಸ್ಕನಾಗಿದ್ದರಿಂದ ಅಲ್ಪವಹಿಯನ್ನು ಉತಾರದಲ್ಲಿ ಹೊರತು ಪಡಿಸಿ ಆತನ ಹೆಸರಿಗೆ ಖಾತೆ ದಾಖಲು ಮಾಡಿ ಸಂಚಕಾರ ಪತ್ರ ನೋಂದಣಿ ಮಾಡಿಕೊಳ್ಳಲು ನಿಮಗೆ

ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ **1** ನೇ ಪ್ರತಿವಾದಿ ನನಗೆ ಜರೂರತ್ ಇದೆ**,** ಕ್ರಯ ಪತ್ರ ನೋಂದಣಿ ಮಾಡುವ ಕಾಲಕ್ಕೆ ಆತನ ಹೆಸರನ್ನು ಕಡಿಮೆ ಮಾಡಿಸಿಕೊಡುವುದಾಗಿ ಹೇಳಿದ್ದು ಆತ ಸಾಕ್ಷಿಯಾಗಿ ಸಹಿ ಮಾಡಿದ್ದಾನೆ ಎಂದು ನುಡಿಯುತ್ತಾರೆ**.** ಸದರಿ ಸಹಿಯನ್ನು ನಿಪಿ**. 2** ಸಿ ಎಂದು ಗುರುತಿಸಲಾಯಿತು**.** ಕಿರಣ**,** ಮಾದನೂರ ಹಾಗೂ ನಾನು ತುರ್ತಾಗಿ **1** ನೇ ಪ್ರತಿವಾದಿ ಬಿನ್ ಶೇತ್ಕಿ ಪ್ಲಾಟ ಮಾಡಲು ಒಪ್ಪಿದ್ದಕ್ಕೆ ರೂ**. 12** ಲಕ್ಷ ಹಣ ಕೊಟ್ಟು ಸಂಚಕಾರ ಪತ್ರಕ್ಕೆ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ**.** ಖರೀದಿ ಸಂಚಕಾರ ಪತ್ರ ಖೊಟ್ಟಿಯಾದ ಕಾರಣ ನ್ಯಾಯಾಲಯದಿಂದ ಯಾವುದೇ ಪರಿಹಾರ ಪಡೆಯಲು ಹಕ್ಕಿಲ್ಲ ಎಂದರೆ ಸರಿಯಲ್ಲ**. 1** ನೇ ಪ್ರತಿವಾದಿಯಿಂದ ರೂ**. 12** ಲಕ್ಷ ಮಾತ್ರ ಪಡೆಯಲು ಅರ್ಹನಿದ್ದೇನೆ ಎಂದರೆ ಸರಿಯಲ್ಲ**.** ಜಮೀನು ಕಿಮ್ಮತ್ತು ಹೆಚ್ಚಿರುವ ಕಾರಣ ದಾವಾ ಸ್ವತ್ತನ್ನು ಲಪಟಾಯಿಸಲು ಕಿರಣ**,** ಮಾದನೂರ ಹಾಗೂ ನಾನು
ಸಂಚಕಾರ ಪತ್ರವನ್ನು ಸೃಷ್ಟಿಸಿದ್ದು, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ**.**